ಕರ್ನಾಟಕ ವಿಧಾನ ಪರಿಷತ್

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2075
2. ವಿಧಾನ ಪರಿಷತ್ ಸದಸ್ಯರ ಹೆಸರು : ಶ್ರೀ ಸೂರಜ್ ರೇವಣ್ಣ
3. ಉತ್ತರಿಸಬೇಕಾದ ದಿನಾಂಕ : 17.03.2022
4. ಉತ್ತರಿಸಬೇಕಾದ ಸಚಿವರು : ಸನ್ಮಾನ್ಯ ಮುಖ್ಯಮಂತ್ರಿಯವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ.	ಕಳೆದ 3 ವರ್ಷಗಳಿಂದ ವಿಶ್ವಬ್ಯಾಂಕ್, ಏಷ್ಯಾ ಅಭಿವೃದ್ಧಿ ಬ್ಯಾಂಕ್ ಹಾಗೂ ಜಪಾನ್ ಅಂತರಾಷ್ಟ್ರೀಯ ಸಹಕಾರ ಸಂಸ್ಥೆಗಳಿಂದ (ಜೈಕಾ) ರಾಜ್ಯ ಸರ್ಕಾರ ಯಾವ ಯಾವ ಯೋಜನೆಗಳಿಗೆ ಎಷ್ಟು ಹಣಕಾಸಿನ ನೆರವು / ಸಾಲ ಪಡೆದಿದೆ; ಈ ಯೋಜನೆಗಳ ಅಂದಾಜು ವೆಚ್ಚ ಎಷ್ಟು; (ಯೋಜನಾವಾರು ವಿವರ ನೀಡುವುದು)	ಕಳೆದ 3 ವರ್ಷಗಳಿಂದ ವಿಶ್ವ ಬ್ಯಾಂಕ್, ಏಷ್ಯಾ ಅಭಿವೃದ್ಧಿ ಬ್ಯಾಂಕ್ ಹಾಗೂ ಜಪಾನ್ ಅಂತರರಾಷ್ಟ್ರೀಯ ಸಹಕಾರ ಸಂಸ್ಥೆಗಳಿಂದ (ಜೈಕಾ) ರಾಜ್ಯ ಸರ್ಕಾರವು ಪಡೆದಿರುವ ಹಣಕಾಸಿನ ನೆರವು / ಸಾಲ ಪಡೆದಿರುವ ಯೋಜನೆಗಳ ವಿವರ ಹಾಗೂ ಈ ಯೋಜನೆಗಳ ಅಂದಾಜು ವೆಚ್ಚದ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.
ಆ.	ಸದರಿ ಯೋಜನೆಗಳಿಗೆ ಈ ಹಣಕಾಸು ಸಂಸ್ಥೆಗಳು ಈವರೆಗೆ ಬಿಡುಗಡೆ ಮಾಡಿರುವ ಮೊತ್ತ ಎಷ್ಟು; (ಯೋಜನಾವಾರು ವಿವರ ನೀಡುವುದು)	ಸದರಿ ಯೋಜನೆಗಳಿಗೆ ಈ ಹಣಕಾಸು ಸಂಸ್ಥೆಗಳು ಈವರೆಗೆ ಬಿಡುಗಡೆ ಮಾಡಿರುವ ಮೊತ್ತದ ಯೋಜನಾವಾರು ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.
ಇ.	ಸರ್ಕಾರ ಈ ಯೋಜನೆಗಳಿಗೆ ನಿಗದಿಪಡಿಸಿದ್ದ ಆಯವ್ಯಯ ಅಂದಾಜು ಮೊತ್ತ ಎಷ್ಟು; ಯೋಜನೆಗಳಿಗೆ ಈವರೆಗೆ ವೆಚ್ಚ ಮಾಡಿರುವ ಹಣ ಎಷ್ಟು; ಬಿಡುಗಡೆ ಆಗಿರುವ ಹಣವನ್ನು ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡಿಕೊಳ್ಳಲಾಗಿದೆಯೇ; ಬಳಕೆ ಮಾಡಿಕೊಳ್ಳದಿದ್ದಲ್ಲಿ, ಕಾರಣಗಳೇನು; (ವಿವರ ನೀಡುವುದು)	ಸರ್ಕಾರ ಈ ಯೋಜನೆಗಳಿಗೆ ಕಳೆದ 3 ವರ್ಷಗಳಲ್ಲಿ (2019-20 ರಿಂದ 2021-22ನೇ ಸಾಲಿನವರೆಗೆ) ನಿಗದಿಪಡಿಸಿದ್ದ ಬಜೆಟ್ ಅಂದಾಜು ಹಾಗೂ ವೆಚ್ಚ ಮಾಡಿರುವ ಹಣದ ವಿವರಗಳು ಈ ಕೆಳಗಿನಂತೆ ಇರುತ್ತವೆ- (ರೂ. ಕೋಟಿಗಳಲ್ಲಿ)

ವರ್ಷ	ಬಜೆಟ್ ಅಂದಾಜು	ವೆಚ್ಚ
2019-20	2744.90	1736.34 (ಪರಿಷ್ಕೃತ ಅಂದಾಜಿನಂತೆ)
2020-21	2439.61	1946.41
2021-22	2995.13	1639.28 (ಜನವರಿ-2022 ರವರೆಗೆ)

ಯೋಜನೆಗಳ ಅನುಷ್ಠಾನವು ಪ್ರಗತಿಯಲ್ಲಿರುತ್ತದೆ. ಆದಾಗ್ಯೂ, ಯೋಜನೆಯ ಅನುಷ್ಠಾನದ ಕೆಲವು ಹಂತಗಳು ಅಂದರೆ, ಭೂ ಸ್ವಾಧೀನ ಪ್ರಕ್ರಿಯೆ, ತಾಂತ್ರಿಕ ಅನುಮೋದನೆಗಳನ್ನು ಪಡೆಯುವುದು ಹಾಗೂ ವಿದೇಶಿ ನೆರವಿನ ಸಂಸ್ಥೆಗಳ ಸಲಹೆಗಳ ಅನುಸಾರ ಯೋಜನೆಯ ವಿನ್ಯಾಸವನ್ನು ಪುನರ್ ರೂಪಿಸುವುದು-ಇವುಗಳು ವಿಳಂಬಕ್ಕೆ ಕಾರಣಗಳಾಗಿರುತ್ತವೆ.

ಈ.	ಈ ಸಂಸ್ಥೆಗಳಿಂದ ವಿವಿಧ ಯೋಜನೆಗಳಿಗೆ ಮತ್ತು ಹಣಕಾಸಿನ ನೆರವು ಪಡೆಯುವ ಉದ್ದೇಶ ಸರ್ಕಾರಕ್ಕೆ ಇದೆಯೇ: ಯಾವ ಯಾವ ಯೋಜನೆಗಳಿಗೆ ಎಷ್ಟು ಮೊತ್ತ ಪಡೆಯಲು ಉದ್ದೇಶಿಸಲಾಗಿದೆ? (ಯೋಜನಾವಾರು ಪೂರ್ಣ ವಿವರ ನೀಡುವುದು)	ಈ ಸಂಸ್ಥೆಗಳಿಂದ ಹೊಸ ಯೋಜನೆಗಳಿಗೆ (ರಾಜ್ಯ ವಲಯ) ಮತ್ತು ಹಣಕಾಸಿನ ನೆರವು ಪಡೆಯಲು ಉದ್ದೇಶಿಸಿದ್ದು, ಈ ಬಗ್ಗೆ ವಿವರಗಳನ್ನು ಅನುಬಂಧ-3 ರಲ್ಲಿ ನೀಡಲಾಗಿದೆ.

ಸಂಖ್ಯೆ : ಆಇ 08 ಯೋಮೇಘ 2022 (ಎಲ್.ಸಿ.ಕ್ಯೂ-2075).

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ.

ಅನುಬಂಧ -1

(ರೂ. ಕೋಟಿಗಳಲ್ಲಿ)

ಕ್ರ.ಸಂ.	ಯೋಜನೆಯ ವಿವರ	ಅಂದಾಜು ವೆಚ್ಚ(ರಾಜ್ಯದ ಪಾಲು ಮತ್ತು ಸಾಲದ/ಹಣಕಾಸು ನೆರವಿನ ಮೊತ್ತ ಸೇರಿದಂತೆ)	ಪಡೆದಿರುವ ಹಣಕಾಸಿನ ನೆರವು/ಸಾಲ		
			2019–20	2020–21	2021–22(ಜನವರಿ 2022ರ ಅಂತ್ಯದವರೆಗೆ)
ಅ	**ವಿಶ್ವ ಬ್ಯಾಂಕ್ ನೆರವಿನ ಯೋಜನೆಗಳು**				
1	ಕರ್ನಾಟಕ ರಾಜ್ಯ ಹೆದ್ದಾರಿ ಸುಧಾರಣೆ- ಹಂತ- 2	4522.50	13.27	0.00	0.00
2	ಸುಜಲಾ-3	412.59	70.46	12.52	0.00
3	ಅಣೆಕಟ್ಟುಗಳ ಪುನಃಶ್ಚೇತನ ಮತ್ತು ಸುಧಾರಣೆ	541.00	91.73	30.23	9.37
4	ಕರ್ನಾಟಕ ನಗರ ನೀರು ಪೂರೈಕೆ ಆಧುನೀಕರಣ ಯೋಜನೆ	1037.80	1.20	79.79	125.23
ಆ	**ಏಷ್ಯಾ ಅಭಿವೃದ್ಧಿ ಬ್ಯಾಂಕ್ ನೆರವಿನ ಯೋಜನೆಗಳು**				
1	ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ	1860.21	301.31	135.67	73.19
2	ಕರ್ನಾಟಕ ಸಮಗ್ರ ಮತ್ತು ನಿರಂತರ ಜಲ ಸಂಪನ್ಮೂಲ ನಿರ್ವಹಣೆ	1125.00	43.07	73.95	54.51
3	ಕರ್ನಾಟಕ ರಾಜ್ಯ ಹೆದ್ದಾರಿ ಸುಧಾರಣೆ- ಹಂತ- 2	2150.40	–0.04	0.00	0.00
4	ಕರ್ನಾಟಕ ರಾಜ್ಯ ಹೆದ್ದಾರಿ ಸುಧಾರಣೆ- ಹಂತ- 3 (ಎಡಿಬಿ 2ನೇ ಸಾಲ)	5334.00	1.79	328.67	380.50
5	ನಿರಂತರ ಕರಾವಳಿ ಸಂರಕ್ಷಣೆ ಮತ್ತು ನಿರ್ವಹಣೆ	911.09	97.18	120.74	0.00
6	ಬೆಂಗಳೂರು ಸ್ಮಾರ್ಟ್ ಎನರ್ಜಿ ಎಫಿಶಿಯಂಟ್ ಪವರ್ ಡಿಸ್ಟ್ರಿಬ್ಯೂಷನ್ ಪ್ರಾಜೆಕ್ಟ್	1089.28	0.00	0.00	173.48
ಇ	**ಜಪಾನ್ ಅಂತರ್ ರಾಷ್ಟ್ರೀಯ ಸಹಕಾರ ಸಂಸ್ಥೆ ನೆರವಿನ ಯೋಜನೆಗಳು**				
1	ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆ, ಹಂತ-3	5550.00	59.43	620.98	485.83
	ಒಟ್ಟು	**24533.87**	**679.40**	**1402.55**	**1302.11**

ಅನುಬಂಧ - 2

(ರೂ. ಕೋಟಿಗಳಲ್ಲಿ)

ಕ್ರ.ಸಂ.	ಯೋಜನೆಯ ವಿವರ	ಜನವರಿ 2022 ರ ಅಂತ್ಯದವರೆಗೆ ಬಿಡುಗಡೆಯಾಗಿರುವ ಮೊತ್ತ
ಅ	**ವಿಶ್ವ ಬ್ಯಾಂಕ್ ನೆರವಿನ ಯೋಜನೆಗಳು**	
1	ಕರ್ನಾಟಕ ರಾಜ್ಯ ಹೆದ್ದಾರಿ ಸುಧಾರಣೆ- ಹಂತ- 2	1883.68
2	ಸುಜಲಾ-3	273.51
3	ಅಣೆಕಟ್ಟುಗಳ ಪುನಃಶ್ಚೇತನ ಮತ್ತು ಸುಧಾರಣೆ	392.27
4	ಕರ್ನಾಟಕ ನಗರ ನೀರು ಪೂರೈಕೆ ಆಧುನೀಕರಣ ಯೋಜನೆ	216.17
ಆ	**ಏಷ್ಯಾ ಅಭಿವೃದ್ಧಿ ಬ್ಯಾಂಕ್ ನೆರವಿನ ಯೋಜನೆಗಳು**	
1	ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ	794.12
2	ಕರ್ನಾಟಕ ಸಮಗ್ರ ಮತ್ತು ನಿರಂತರ ಜಲ ಸಂಪನ್ಮೂಲ ನಿರ್ವಹಣೆ	280.05
3	ಕರ್ನಾಟಕ ರಾಜ್ಯ ಹೆದ್ದಾರಿ ಸುಧಾರಣೆ- ಹಂತ- 2	1684.86
4	ಕರ್ನಾಟಕ ರಾಜ್ಯ ಹೆದ್ದಾರಿ ಸುಧಾರಣೆ- ಹಂತ- 3(ಎಡಿಬಿ 2ನೇ ಸಾಲ)	710.96
5	ನಿರಂತರ ಕರಾವಳಿ ಸಂರಕ್ಷಣೆ ಮತ್ತು ನಿರ್ವಹಣೆ	541.82
6	ಬೆಂಗಳೂರು ಸ್ಮಾರ್ಟ್ ಎನರ್ಜಿ ಎಫಿಶಿಯಂಟ್ ಪವರ್ ಡಿಸ್ಟ್ರಿಬ್ಯೂಷನ್ ಪ್ರಾಜೆಕ್ಟ್	173.48
ಇ	**ಜಪಾನ್ ಅಂತರ್ ರಾಷ್ಟ್ರೀಯ ಸಹಕಾರ ಸಂಸ್ಥೆ ನೆರವಿನ ಯೋಜನೆಗಳು**	
1	ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆ, ಹಂತ-3	1166.24
	ಒಟ್ಟು	**8117.16**

ಅನುಬಂಧ-3

(ರೂ. ಕೋಟಿಗಳಲ್ಲಿ)

ಕ್ರಮ ಸಂಖ್ಯೆ	ಯೋಜನೆಯ ವಿವರ	ಹಣಕಾಸು ನೆರವು ಪಡೆಯಲು ಉದ್ದೇಶಿಸಿರುವ ಸಂಸ್ಥೆ	ಯೋಜನೆಯ ಒಟ್ಟು ಮೊತ್ತ	ಪಡೆಯಲು ಉದ್ದೇಶಿಸಿರುವ ಹಣಕಾಸು ನೆರವು/ಸಾಲದ ಮೊತ್ತ	ಷರಾ
1	ಕರ್ನಾಟಕ ನಗರ ನೀರು ಪೂರೈಕೆ ಆಧುನೀಕರಣ ಯೋಜನೆ –ಹೆಚ್ಚುವರಿ ನೆರವು	ವಿಶ್ವ ಬ್ಯಾಂಕ್	1627.30	1100.30	
2	ಅಣೆಕಟ್ಟುಗಳ ಪುನ:ಶ್ಚೇತನ ಮತ್ತು ಸುಧಾರಣೆ ಯೋಜನೆ ಹಂತ 2 ಮತ್ತು ಹಂತ 3	ವಿಶ್ವ ಬ್ಯಾಂಕ್	1500.00	1050.00	ಅಣೆಕಟ್ಟುಗಳ ಪುನ:ಶ್ಚೇತನ ಮತ್ತು ಸುಧಾರಣೆ ಯೋಜನೆ, ಹಂತ 2ಕ್ಕೆ ಸಂಬಂಧಿಸಿದಂತೆ ಸಾಲ ಒಪ್ಪಂದದ ಪ್ರಕ್ರಿಯೆಯು ಪೂರ್ಣಗೊಂಡಿದ್ದು, ಯೋಜನಾ ಒಪ್ಪಂದದ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ.